# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1586 |
| ಮಾನ್ಯ ಸದಸ್ಯರ ಹೆಸರು | : | ಶ್ರೀ.ಶಾಂತಾರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 21-03-2025 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಾಸಿಸುವ ಹಿಂದೂ-ಕ್ಷತ್ರಿಯ ಜನಾಂಗವನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಲಾಗಿದೆಯೇ; ಯಾವ ಮೀಸಲಾತಿ ಪಟ್ಟಿಯಲ್ಲಿ ಸೇರಿಸಲಾಗಿದೆ; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ:30.03.2002ರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಹಿಂದೂ-ಕ್ಷತ್ರಿಯ ಜಾತಿಯು ಸೇರಿರುವುದಿಲ್ಲ. |
| ಆ) | ರಾಮ ಕ್ಷತ್ರಿಯವರು ಯಾವ ಮೀಸಲಾತಿ ಅಡಿಯಲ್ಲಿ ಸೇರುತ್ತಾರೆ; ರಾಮ ಕ್ಷತ್ರಿಯರು, ಹಿಂದೂ ಕ್ಷತ್ರಿಯವರು ಒಂದೇ ಜಾತಿ ವರ್ಗಕ್ಕೆ ಸೇರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ:30.03.2002ರ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿನ ಪ್ರವರ್ಗ-II(ಎ)ರ ಕ್ರಮ ಸಂಖ್ಯೆ:93 (ಹೆಚ್)ರಡಿಯಲ್ಲಿ ರಾಮ ಕ್ಷತ್ರಿಯ ಜಾತಿಯನ್ನು ಸೇರಿಸಲಾಗಿರುತ್ತದೆ. ಸದರಿ ಜಾತಿಯವರು ಭಾರತ ಸಂವಿಧಾನದ ಅನುಚ್ಛೇದ 15(4) ಮತ್ತು 16(4)ರಡಿ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ. |
| ಇ) | ರಾಮ ಕ್ಷತ್ರಿಯರು ಶಾಲಾ ದಾಖಲಾತಿಗಳಲ್ಲಿ ಹಿಂದೂ ಕ್ಷತ್ರಿಯ ಎಂದು ನಮೂದಿಸಿದ್ದು, ಈಗ ಹಿಂದುಳಿದ ವರ್ಗ ಜಾತಿ ಪ್ರಮಾಣ ಪತ್ರ ಪಡೆಯಲಾಗದೆ ಶಿಕ್ಷಣ ಸೌಲಭ್ಯ ಹಾಗೂ ಸರ್ಕಾರಿ ಉದ್ಯೋಗದ ಮೀಸಲಾತಿಯಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ; | ಶ್ರೀ ಕೆ. ಜಯಪ್ರಕಾಶ ಹೆಗ್ಡೆ ರವರ ನೇತೃತ್ವದ ಪ್ರಥಮ ವರದಿ-2022ರಲ್ಲಿ ಹಿಂದೂ-ಕ್ಷತ್ರಿಯ ಜಾತಿ ಯನ್ನೊಳಗೊಂಡಂತೆ ಒಟ್ಟು 17 ಜಾತಿ / ಸಮುದಾಯಗಳ ಕುರಿತ ಸಲಹೆ / ಶಿಫಾರಸ್ಸುಗಳನ್ನು ಹಿಂದುಳಿದ ವರ್ಗಗಳ ಆಯೋಗವು ಸರ್ಕಾರಕ್ಕೆ ಸಲ್ಲಿಸಿದ್ದು, ವರದಿಯು ಪರಿಶೀಲನೆಯಲ್ಲಿರುತ್ತದೆ. |
| ಈ) | ಹಿಂದೂ ಕ್ಷತ್ರಿಯ ಎಂದು ನಮೂದಿಸಿದ್ದವರಿಗೆ ಮೀಸಲಾತಿ ಕಲ್ಪಿಸುವ ಸಂಬಂಧ ಹಿಂದುಳಿದ ವರ್ಗಗಳ ಆಯೋಗ ನೀಡಿರುವ ಶಿಫಾರಸ್ಸುಗಳೇನು; ವರದಿಯ ಪ್ರತಿ ನೀಡುವುದು; ಹಿಂದುಳಿದ ವರ್ಗಗಳ ಪ್ರಮಾಣ ಪತ್ರ ವಿತರಿಸಲು ಇರುವ ತೊಡಕುಗಳೇನು; | |

| | | |
|---|---|---|
| ಉ) | ಮೇಲ್ಕಂಡ ಜಿಲ್ಲೆಗಳ ಭಾಗದಲ್ಲಿರುವ ರಾಮ ಕ್ಷತ್ರಿಯರು ಶಾಲಾ ದಾಖಲಾತಿಗಳಲ್ಲಿ ಹಿಂದೂ ಕ್ಷತ್ರಿಯ ಎಂದು ನಮೂದಿಸಿದ್ದವರಿಗೆ ಕೇಂದ್ರ ಓ.ಬಿ.ಸಿ. ಪಟ್ಟಿಗೆ ಸೇರಿಸಲು ಪ್ರಸ್ತಾವನೆ ಸಲ್ಲಿಸುವ ಕುರಿತು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ; ಯಾವ ಕಾಲಮಿತಿಯಲ್ಲಿ ಶೀಫಾರಸ್ಸು ಮಾಡಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು? | ಕೇಂದ್ರ ಸರ್ಕಾರದ ಹಿಂದುಳಿದ ವರ್ಗಗಳ ಪಟ್ಟಿಗೆ ಯಾವುದೇ ಜಾತಿ/ಸಮುದಾಯವನ್ನು ಸೇರಿಸುವುದು/ ಕೈಬಿಡುವುದು ಭಾರತ ಸಂವಿಧಾನದ ಅನುಚ್ಛೇದ 342(A) (a) (2) ರ ಅನ್ವಯ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಅಭಿಪ್ರಾಯದ ಮೇರೆಗೆ ಕೇಂದ್ರ ಸರ್ಕಾರ ಅಗತ್ಯ ಕ್ರಮ ವಹಿಸಬೇಕಾಗಿರುತ್ತದೆ. |

ಸಂಖ್ಯೆ:ಹಿಂವಕ 111 ಬಿಸಿಎ 2025

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು